†ಶ್ರೀ ಕೆ. ನಾಗಪ್ಪ ಆಳ್ವ.—ಅದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗಿದೆ. ತುರ್ತು ಪರಿಸ್ಥಿತಿಯ ಕಾರಣ ಅದನ್ನು ಫಸ್ಟ್ ಸ್ಪೇಜ್, ಸೆಕೆಂಡ್ ಸ್ಪೇಜು ಎಂದು ಮಾಡಿ, ಫಸ್ಟ್ ಸ್ಪೇಜಿನಲ್ಲಿ ನಾವು ಕೆಲಸ ಮುಗಿಸುವಂತೆ ಮಾಡಿದ್ದೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈಗ ಸಾಧಾರಣವಾಗಿ ಎರೆಡು ವರ್ಷಗಳಿಂದಲೂ ಆ ಕಟ್ಟಡದ ಕಂಟ್ರಾಕ್ಟ್ ದಾರರಿಗೆ ಕೊಡಬೇಕಾದ 80 ಸಾವಿರ ರೂಪಾಯಿಗಳನ್ನು ಕೊಡದೆ ಇರುವುದರಿಂದ ಅವರು ಕಟ್ಟಡವನ್ನು ಬಿಟ್ಟುಕೊಡದೆ ಇರುವುದು ಮತ್ತು ದುಡ್ಡಿನ ಕೊರತೆಯಿರುವುದು ಕಾರಣವಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಹಾಗೇನೂ ಇಲ್ಲ.

ಶ್ರೀ ಬಿ. ಬೈರಪ್ಪಾಜಿ.—ಆ ಆಸ್ಪತ್ರೆಯ ಕಟ್ಟಡಕ್ಕೆ ಎಸ್ಟಿಮೇಟ್ ಆಗಿದ್ದುದು ಎಷ್ಟು, ಈಗ ಅದರಲ್ಲಿ ಖರ್ಚಾಗಿರುವ ಹಣವೆಷ್ಟು ಮತ್ತು ಆ ಕಟ್ಟಡದ ಕಂಟ್ರಾಕ್ಟುದಾರನಿಗೆ ಕೊಡಬೇಕಾದ ಬಾಕಿ ಹಣ ಎಷ್ಟು ?

ಶ್ರೀ ಕೆ. ನಾಗಪ್ಪ ಆಳ್ವ.—ಅದರ ಎಸ್ಟಿಮೇಟು 13,80,500 ರೂಪಾಯಿಗಳು. ಈಗಾಗಲೇ ಆ ಕಟ್ಟಡಕ್ಕೆ 6 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚಾಗಿದೆ. ಬಾಕಿ ಹಣವನ್ನು ಖರ್ಚು ಮಾಡುತ್ತಿದ್ದೇವೆ.

ಶ್ರೀ ಸಂಜೀವನಾಥ ಐಕಲ.—ಈ ಆಸ್ಪತ್ರೆಯನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಿದ ಮೇಲೆ ಹಳೆಯ ಆಸ್ಪತ್ರೆ ಬಿಲ್ಡಿಂಗ್ ಏನು ಮಾಡುತ್ತೀರಿ ?

MR. SPEAKER.—How does it arise out of this question?

SRI SANJEEVANATH AIKALA.—Because, on that account alone, the occupation of this new building is delayed.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಹಳೆಯ ಆಸ್ಪತ್ರೆಯು ಬಹಳ ಅವಶ್ಯಕವಿತ್ತು. ಅಲ್ಲಿ ಸ್ಥಳಾವಕಾಶ ಇಲ್ಲದೆ ಇದ್ದುದರಿಂದ ಹೊಸ ಆಸ್ಪತ್ರೆಗೆ ವರ್ಗಾಯಿಸುತ್ತಿದ್ದೇವೆ, ಅದನ್ನ ಖಂಡಿತವಾಗಿಯೂ 1966-67ನೇ ಸಾಲಿನಲ್ಲಿ ಹೊಸ ಆಸ್ಪತ್ರೆಗೆ ವರ್ಗಾಯಿಸುತ್ತೇವೆಂದು ಹೇಳಿದ್ದೀರಿ, ಯಾವ ದಿವಸ ಈ ಆಸ್ಪತ್ರೆಯನ್ನು ಸ್ಥಳಾಂತರ ಮಾಡುತ್ತೀರಿ ಎಂಬುದನ್ನಾದರೂ ಹೇಳುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಸಾಧಾರಣವಾಗಿ ಸ್ಥಳಾವಕಾಶ ಹಳೆಯ ಆಸ್ಪತ್ರೆಯಲ್ಲಿಯೂ ಇದೆ. ಆದರೆ ಆಸ್ಪತ್ರೆಯನ್ನು ಈಗ ಇದ್ದುದಕ್ಕಿಂತಲೂ ಸ್ವಲ್ಪ ದೊಡ್ಡದು ಮಾಡಬೇಕೆಂದು ಅದನ್ನು ಬೇರೆ ಕಡೆಗೆ ವರ್ಗಾಯಿಸುತ್ತಿದ್ದೇವೆ. ಇದನ್ನು ಈ ವರ್ಷದ ಅಂತ್ಯದಲ್ಲಿ ವರ್ಗಾಯಿಸುತ್ತೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಆ ಕಟ್ಟಡದ ಕೆಲಸವನ್ನು ಪೂರೈಸಲು ಕಾಲಮಿತಿಯನ್ನು ಗೊತ್ತುಮಾಡಿರಲಿಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಮಾಡಿದ್ದೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಎಷ್ಟು ದಿವಸಗಳಲ್ಲಿ ಪೂರೈಸಬೇಕೆಂದು ಹೇಳಿದ್ದೀರಿ ?

ಶ್ರೀ ಕೆ. ನಾಗಪ್ಪ ಆಳ್ವ.—ಈ ವರ್ಷದ ಆಖೈರಿನಲ್ಲಿ ಪೂರೈಸಬೇಕೆಂದು ಹೇಳಿದ್ದೇವೆ.

Starting of Cement Factories

*Q.—124. SRI J. P. SARWESH (Serum).—

Will the Government be pleased to state :—

(*a*) the names of the districts along with the names of places and taluks in the State where the Cement Corporation of India is conducting Survey for starting of Cement Factories in the State ;

(*b*) the number of Cement Factories that are proposed to be started in the State in the coming four years ;

(*c*) the agencies which have come forward to start cement companies in the State ;

(*d*) the proposed production of each cement factory?

A.—SRI K. MALLAPPA (Minister for Industries and Commerce).—

(a) (i) Sedam area, Sedam Taluk, Gulbarga District.
(ii) Gokak area, Gokak Taluk, Belgaum District.

(b) Five.

(c) (i) M/s. A. C. C. Ltd., Bombay.
(ii) M/s. Nagaragali Cement Co., Ltd., Hubli.
(iii) M/s. Seth Lachman Das Sons, Hyderabad.
(iv) M/s. Sundaram Industrial Corporation, Bangalore.
(v) M/s. Cement Corporation of India, Ltd., New Delhi.

(d) *Vide* statement appended.

STATEMENT

Sl. No.	Location of Factory	Production on capacity
1.	Wadi, Gulbarga District ..	4 lakh tons.
2.	Hubli, Dharwar District ..	2 lakh tons.
3.	Sedam, Gulbarga District ..	(a) 2 lakh tons (as proposed by M/s. Seth Lachmandas Sons' Hyderabad.) (b) 3 lakh tons at the first stage to commence from 1969, with an ultimate capacity of 4 lakh tons from the subsequent year onwards (as proposed by the Cement Corporation of India Ltd., New Delhi).
4.	Hosadurga, Chitradurga District.	2 lakh tons.

SRI J. P. SARWESH.—When will the survey and investigation be completed and when will these two factories start working?

†SRI K. MALLAPPA.—Survey work has been going on and in the meanwhile simultaneously survey has been proceeding for the establishment of the factory.

SRI J. P. SARWESH.—What will be the approximate investment of capital to start these four factories by the Cement Corporation of India and private parties?

SRI K. MALLAPPA.—It depends upon the size, Sir. In the case of 2 lakhs tonnes production per annum, the investment would be Rs. 4 to 5 crores.

SRI C. S. HULKOTI.—Supplementary to (c), may I know how far the progress of work has been made by Messrs. Nagargalli Cement Factory in Hubli?

SRI K. MALLAPPA.—Progress for getting lime-stone has been going on. Some stone has been cleared for factory site and some amount has been collected for share capital.

ಶ್ರೀ ಕೆ. ಪಿ. ರೇಪಣ್ಣಸಿದ್ದಪ್ಪ.—ಹೊಸದುರ್ಗ ಸಿಮೆಂಟ್ ಫ್ಯಾಕ್ಟರಿಯ ವಿಷಯವೇ ಕಾಣುತ್ತಿಲ್ಲ. ಅದರ ಸಮಾಚಾರವೇನು ?

ಶ್ರೀ ಕೆ. ಮಲ್ಲಪ್ಪ.—ಹೊಸ ದುರ್ಗದಲ್ಲಿ ಸಿಮೆಂಟ್ ಕಾರ್ಖಾನೆ ಸ್ಥಾಪಿಸಲು ಒಬ್ಬರಿಗೆ ಲೈಸೆನ್ಸ್ ಕೊಡ ಲಾಗಿತ್ತು. ಅದರೆ ಅವರು ಸಿಸಿಮೆಂಟ್ ಫ್ಯಾಕ್ಟರಿಯನ್ನು ಸ್ಥಾಪನೆಮಾಡದೆ ಇದ್ದುದರಿಂದ ಲೈಸೆನ್ಸ್ ಕ್ಯಾನ್ಸಲ್ ಆಯಿತು. ಹೊಸ ಪಾರ್ಟಿ ಈಗ ಅಪ್ಲಿಕೇಷನ್ ಕೊಟ್ಟಿದ್ದಾರೆ. ಅದು ಪರಿಶೀಲನೆಯಲ್ಲಿದೆ.

SRI G. V. GOWDA.—May I know whether all these five agencies have been given licence ?

ಶ್ರೀ ಕೆ. ಮಲ್ಲಪ್ಪ.—ಈಗ M/s. A. C. C. (Ltd)., ಬೊಯಾಯಿ ಇವರಿಗೆ ಲೈಸೆನ್ಸ್ ಕೊಟ್ಟಿದೆ. M/s. Nagaragali Cement Co., Ltd., ಹುಬ್ಬಳ್ಳಿ ಇವರಿಗೆ ಲೈಸೆನ್ಸ್‌ಕೊಟ್ಟಿದೆ. M/s. Sundaram Industrial Corporation Bangalore ಇವರದು ಇನ್ನೂ ಪೆಂಡಿಂಗ್‌ನಲ್ಲಿದೆ. M/s. Seth Lac man Das and Sons, ಹೈದರಾಬಾದ್ ಇವರಿಗೆ ಲೈಸೆನ್ಸ್ ಸಿಕ್ಕಿದೆ. M/s. Cement Corporation of India Ltd., ಹೊಸಪೇಪಿ. ಇವರಿಗೆ ಲೈಸೆನ್ಸ್ ಸಿಕ್ಕಿದೆ.

ಶ್ರೀ ಬಿ. ಬೈರಪ್ಪಾಜಿ.—M/s. Sundaram Industrial Corporation ಬೆಂಗಳೂರು ಇವರು ಹೊಸದುರ್ಗದಲ್ಲಿ ಸಿಮೆಂಟ್ ಕಾರ್ಖಾನೆಯನ್ನು ಪ್ರಾರಂಭಮಾಡುವುದಕ್ಕೆ ಲೈಸೆನ್ಸ್ ಕೇಳಿದ್ದಾರೆ. ಅವರಿಗೆ ಲೈಸೆನ್ಸ್ ಕೊಡುವುದು ಇನ್ನೂ ಇತ್ಯರ್ಥವಾಗಿಲ್ಲ, ಕಾರಣವೇನು ?

ಶ್ರೀ ಕೆ. ಮಲ್ಲಪ್ಪ.—ಅದು ಕೇಂದ್ರ ಸರ್ಕಾರದಲ್ಲಿ ಪೆಂಡಿಂಗ್ ಇದೆ. ಅದರಲ್ಲಿ ಕೆಲವು ತೊಂದರೆಗಳಿವೆ. ಹೊಸದುರ್ಗ ಸಿಮೆಂಟ್ ಫ್ಯಾಕ್ಟರಿಗೆ ಸುಮಾರು ರೈಲ್ವೆ ಮತ್ತು ಕಮ್ಯುನಿಕೇಷನ್ ಸೌಕರ್ಯ ಇಲ್ಲದೆ ಇರು ವುದರಿಂದ ಅದನ್ನು ಕೇಂದ್ರ ಸರ್ಕಾರದವರು ವಿಚಾರ ಮಾಡುತ್ತಿದ್ದಾರೆ.

ಶ್ರೀ ಸಿದ್ದಯ್ಯ ಕಾಶೀಮಠ.—ಮೈಸೂರು ದೇಶವು ಸಿಮೆಂಟ್ ಉತ್ಪಾದನೆಯಲ್ಲಿ ಸೆಲ್ಫ್-ಸಫಿಷಿಯೆಂಟ್ ಆಗಿ ಯಾವಾಗ ಆಗುತ್ತದೆ?

ಶ್ರೀ ಕೆ. ಮಲ್ಲಪ್ಪ.—ಬರೀ ಮೈಸೂರೇ ಅಲ್ಲ. ಇಡೀ ಇಂಡಿಯಾ ದೇಶವನ್ನೇ ಒಟ್ಟಾಗಿ ತೆಗೆದು ಕೊಳ್ಳಬೇಕಾಗುತ್ತದೆ. ಮೈಸೂರಿನಲ್ಲಿ ಸಿಮೆಂಟ್ ತಯಾರಾಗಕ್ಕೆ ಫ್ಯಾಕ್ಟರಿಗಳನ್ನು ಸ್ಥಾಪನೆಮಾಡಿದರೆ ಆಗ ಇದು ಸೆಲ್ಫ್-ಸಫಿಷಿಯೆಂಟಾಗುತ್ತದೆ. ಸಿಮೆಂಟ್ ತಯಾರಿಕೆಯನ್ನು ಆಲ್-ಇಂಡಿಯಾ ಬೇಸಿಸ್ ಮೇಲೆ ತೆಗೆದುಕೊಳ್ಳಬೇಕಾಗುತ್ತದೆ. ಎಲ್ಲಾ ಸ್ಟೇಟುಗಳನ್ನು ಗಣನೆಗೆ ತೆಗೆದುಕೊಂಡು ಒಂದೊಂದು ಸ್ಟೇಟಿಗೆ ಇಷ್ಟಿಷ್ಟು ಎಂದು (ಸಿಮೆಂಟ್) ಹಂಚಿಕೆಯಾಗುತ್ತದೆ. ಇಪ್ಪೊತ್ತಿನ ಪರಿಸ್ಥಿತಿಯಲ್ಲಿ ಆಲ್ ಇಂಡಿಯಾ ದೃಷ್ಟಿಯಿಂದ ಸಾಕಷ್ಟು ಸಿಮೆಂಟ್ ತಯಾರಾಗುತ್ತಿಲ್ಲ.

SRI G. V. GOWDA.—May I know the probable time when these factories will go into production ?

SRI K. MALLAPPA.—It is hoped that within the next two to three years, they will go into production.